# ಸುಗಮ್ಯ ಕಾವ್ಯ ಮತ್ತು ಸಂಗೀತ

'ಕಾವ್ಯ ಅತ್ಯುತ್ಕೃಷ್ಟ ಬೌದ್ಧಿಕ ಚಟುವಟಿಕೆ' ಎಂಬುದು ಕವಿಗಳ ತೀರ್ಮಾನವೇ ಇರಬೇಕು. ಹಾಗಿದ್ದರೆ ಸಹೃದಯನು ಕವಿಯನ್ನು ತಲುಪುವ ಬಗೆ ಹೇಗೆ? ಅದಕ್ಕೆಂದೇ ಸಂಗೀತದ ಆಶ್ರಯ ಪಡೆಯಬೇಕಾಯಿತು. ಸಂಗೀತವೂ ಸಾಹಿತ್ಯದಷ್ಟೆ ಸ್ವತಂತ್ರವೂ, ಕ್ಲಿಷ್ಟ ಪ್ರಕಾರವೂ ಆದ್ದರಿಂದ ಇವೆರಡು ಕ್ಷೇತ್ರಗಳೂ ಗಣ್ಯ ಪರಿಣಿತರ ವ್ಯವಹಾರವಾಗಿಯೇ ಉಳಿದಿತ್ತು. ಗಮಕ ಕಲೆಯ ಉದ್ದೇಶವೇ ಕಾವ್ಯಾಸ್ವಾದನೆ. ಕುಮಾರವ್ಯಾಸ, ಲಕ್ಷ್ಮೀಶರ ಅದ್ಭುತ ಕಾವ್ಯಸೌಂದರ್ಯದ ದರ್ಶನ ಮಾಡಿಸಿದವರು ಗಮಕಿಗಳೇ. ಅದೂ ಸಹ ಒಂದು ಸೀಮಿತ ವರ್ಗದ ಕಲಾಚಟುವಟಿಕೆಯಾಗಿಯೆ ಉಳಿಯಿತು. ಕಾಲಾಂತರದಲ್ಲಿ ಛಂದಸ್ಸಿನಲ್ಲಿ ಅಡಗಿ ಕುಳಿತಿದ್ದ ಕಾವ್ಯದೇವತೆ ಹೊರಗೆ ಬಂದಳು. ಸಂಗೀತವೂ ತನ್ನ ಬಿಗಿ ಮಟ್ಟುಗಳನ್ನು ಸಡಿಲಿಸಿ ಯಾವ ಪರಿಣತಿಯನ್ನೂ ಹೊಂದದ ಹೃದಯಗಳಿಗೂ ಸರಾಗವಾಗಿ ಹರಿಯಿತು. ಹೀಗೆ ಭಾವಗೀತೆ ಪ್ರಾಪ್ತವಾಯಿತು. ಸಾಮಾನ್ಯನಿಗೂ ಕಾವ್ಯಾಸ್ವಾದನೆ ಮತ್ತು ಸಂಗೀತದ ಸಖ್ಯ ಏಕಕಾಲದಲ್ಲಿ ಲಭ್ಯವಾಯಿತು.

ಮೊದಲಿಗೆ, ನವೋದಯದ ಕವಿಗಳ ರಚನೆಗಳನ್ನು ಹಾಡುವಾಗ ಭಾವಗೀತೆ ಸಾಹಿತ್ಯ ಪ್ರಧಾನವಾಗಿತ್ತು. ಕಾವ್ಯ ಬರುಬರುತ್ತಾ ಭಾವದ ಭಾರವನ್ನು ತಗ್ಗಿಸಿಕೊಂಡು ಸುಗಮ್ಯವಾಯಿತು. ಆಗ ಸಹಜವಾಗಿಯೆ ಸಂಗೀತದ ಒತ್ತು ಹೆಚ್ಚು ಕೇಳಿಸತೊಡಗಿತು. ಪರಿಣಾಮವಾಗಿ ಕೀರ್ತನೆಗಳು, ದಾಸರ ಪದಗಳು ಕೇಳಲ್ಪಟ್ಟವು. ಸಹೃದಯನಿಗೆ ತನಗೆ ಬೇಕಾದದ್ದನ್ನು ಪಡೆದುಕೊಳ್ಳುವ ಶಕ್ತಿಯಿದೆ. ಆಗಾಗ ತನ್ನ ಆಸಕ್ತಿಯನ್ನು ಬದಲಿಸಿಕೊಳ್ಳಬಲ್ಲ. ರಸಾಸ್ವಾದನೆಗೆ ವಚನಗಳನ್ನು ಆಮೇಲೆ ತತ್ವಪದಗಳನ್ನು ಆಯ್ದುಕೊಂಡ. ನಂತರ ಕವಿಗಳೂ ಸಹ ಸಂಗೀತಕ್ಕಾಗಿಯೆ ಕವಿತೆಗಳನ್ನು ರಚಿಸಿದರು. ಈ ಎಲ್ಲ ಲಘು ಪ್ರಕಾರಗಳನ್ನು ಒಂದುಗೂಡಿಸಿ ಸುಗಮ ಸಂಗೀತವೆಂದು ಕರೆದು ಪೋಷಿಸಿ ಬೆಳೆಸಲಾಗುತ್ತಿದೆ. ಈಗ ಸುಗಮ ಸಂಗೀತ ಶ್ರೀಸಾಮಾನ್ಯನಿಗೆ ಕಾವ್ಯಾನುಭೂತಿ ನೀಡುತ್ತಿದೆಯೆಂಬುದರಲ್ಲಿ ಎರಡು ಮಾತಿಲ್ಲ.

ಋಕ್ಕುಗಳು ಸಂವಹನಕ್ಕಾಗಿ ಸಾಮವೇದದ ಆಶ್ರಯ ಪಡೆದದ್ದು ತಿಳಿದ ವಿಷಯವೆ. ವೇದದಲ್ಲಿಯೂ ಭಾವಗೀತಾತ್ಮಕ ಸ್ತೋತ್ರಗಳಿವೆ ಎಂಬುದನ್ನು ಹಿರಿಯ ಲೇಖಕ ಡಾ. ಪ್ರಭುಶಂಕರರು ತಮ್ಮ ಸಂಶೋಧನಾ ಕೃತಿಯಲ್ಲಿ ಪ್ರತಿಪಾದಿಸುತ್ತಾರೆ. ಉಷಸ್ ಒಬ್ಬ ಋಷಿಗೆ ನವವಧುವಿನಂತೆ ಕಂಡರೆ ಮತ್ತೊಬ್ಬರಿಗೆ ನರ್ತಕಿಯಂತೆ, ಸಾಗರದ ಅಲೆಗಳಂತೆ ಕಂಡಿದ್ದಾಳೆ. ಓಲ್ಡನ್‌ಬರ್ಗ್ ಕೂಡ ಯಜ್ಞೋಕ್ತ ಸೂಕ್ತಗಳ ಹೊರತಾಗಿಯೂ ಋಗ್ವೇದದಲ್ಲಿ ಹಲವು ಗೀತಾತ್ಮಕ ರಚನೆಗಳಿವೆ ಎಂಬುದನ್ನು ಒಪ್ಪಿಕೊಳ್ಳುತ್ತಾನೆ.

ಕಳೆದ ಶತಮಾನದ ಇಪ್ಪತ್ತರ ದಶಕದಲ್ಲಿ ಕ್ಲಿಷ್ಟ ರಚನೆಯಾದ ಸಾನೆಟ್ ಹಾಡುಗಾರಿಕೆಯಿಂದ ಬೇಸತ್ತು ಪಾಶ್ಚಾತ್ಯರು ಸುಗಮ ಸಂಗೀತದತ್ತ ಹೊರಳಿದರು. ಕವಿಗಳು ಶೋಕಗೀತೆಗಳನ್ನು (ಎಲಿಜಿ) ಬರೆದರು. **Our sweetest songs are those that tell of saddest thoughts** ಎಂಬ ಮಾತಿದೆ. ನಮ್ಮ ಶೋಕ ಭಾವನೆಗಳನ್ನು ಹೇಳುವ ಹಾಡುಗಳೇ ಅತಿ ಮಧುರ. 'ಹಿಂದೆ ಹೇಗೆ ಚಿಮ್ಮುತಿತ್ತು ಕಣ್ಣ ತುಂಬ ಪ್ರೀತಿ/ ಈಗ ಯಾಕೆ ಜ್ವಲಿಸುತಿದೆ ಏನೋ ಶಂಕೆ ಭೀತಿ' ಎಂಬಂತಹ ದಾಂಪತ್ಯದ ಅನಿವಾರ್ಯ ಸ್ಥಿತ್ಯಂತರವನ್ನು ಹೇಳುವ ಹೃದ್ಯವಾದ ಸರಳ ಸಾಲುಗಳು ಸಾಮಾನ್ಯ ಸಂಸಾರಿಗರನ್ನು ಕಲಕಬಲ್ಲದು. ಹಿರೀಕರು (ಪೆಟ್ರಿಯಾರ್ಕ್ಸ್) ಯಾವುದನ್ನೂ ಶ್ರೇಷ್ಠವೆಂದು ಕಾಪಿಟ್ಟುಕೊಳ್ಳಲಾಗುವುದಿಲ್ಲ. ಸರೀಕರು (ಬೂರ್ಜ್ವಾ) ಪರ್ಯಾಯವನ್ನು ತಾವಾಗಿಯೆ ಹುಡುಕಿಕೊಳ್ಳುತ್ತಾರೆ. ಜಾರ್ಝ್ ಹುಟ್ಟಿದ್ದು ಅಮೆರಿಕದ ಕೊಳೆಗೇರಿ (ಘೆಟ್ಟೋ)ಗಳಲ್ಲಿ. ನಮ್ಮ ಜನಪದರು ಕಲಿಕೆಯ ಹಿನ್ನೆಲೆ ಇಲ್ಲದೆಯೇ 'ಬಡವನು ಸತ್ತಾರೆ ಸುಡಲೀಕೆ ಸೌದಿಲ್ಲ, ಒಡಲ ಬೆಂಕೀಲಿ ಹೆಣ ಬೆಂದೊ' ಎಂಬಂತಹ ಅತ್ಯುತ್ತಮ ಸಾಹಿತ್ಯ ಮತ್ತು ರಾಗ ರಚನೆಗಳನ್ನು ಜನಮಾನಸಕ್ಕೆ ನೀಡಿದರು. ಚಲನಚಿತ್ರ ಗೀತೆ ಎಂದು ಎಲ್ಲವನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಹಲವು ಹಳೆಯ ಚಿತ್ರಗೀತೆಗಳು ಈಗಲೂ ನಮ್ಮನ್ನು ಕಾಡುತ್ತವೆ.

ಈ ಎಲ್ಲ ಕಲೆಗಳೂ ವರ್ಗ, ಜಾತಿ ಭೇದವಿಲ್ಲದೆ ಸಕಲರಿಗೂ ಹೊಕ್ಕುದಕ್ಕುವಂತಿರಬೇಕು. ರಸಿಕನಿಗೆ ಆಯ್ಕೆ ಸುಗಮವಾಗಬೇಕು, ಆಗ ಮಾತ್ರ ಕಲೆ ಜೀವಂತವಾಗಿರಲು ಸಾಧ್ಯ. ಆಕಾಶವಾಣಿ, ದೂರದರ್ಶನ ಮತ್ತಿತರ ಪ್ರಸಾರ ಮಾಧ್ಯಮಗಳು ಕಾನೂನಿನ ತೊಡಕುಗಳನ್ನು ನಿವಾರಿಸಿ ಗುಣಮಟ್ಟದ ಹಾಡುಗಳು ಕೇಳುಗರನ್ನು ತಲುಪುವಂತೆ ನೋಡಿಕೊಳ್ಳಬೇಕು. ಸುಗಮ ಸಂಗೀತದ ಪ್ರಕಾರ ಹಲವು ಶ್ರೇಷ್ಠ ಗಾಯಕರನ್ನು ನೀಡಿದೆ. ನವೋದಯ ಕವಿಗಳಿಂದ ಪ್ರಾರಂಭವಾದ ಕಾವ್ಯಧಾರೆ ನವ್ಯ, ದಲಿತ ಬಂಡಾಯದವರೆಗೂ ಚಾಚಿದೆ. ನವ್ಯದ ಕೆಲ ಕವಿಗಳು ಹಾಡುಗಾರಿಕೆಯನ್ನು ವಿರೋಧಿಸಿದ್ದೂ ಉಂಟು. ಈ ಪ್ರಕಾರವನ್ನು ಮುನ್ನೆಲೆಗೆ ತಂದ 'ಕುರಿಗಳು ಸಾರ್..' ಒಂದು ಅನನ್ಯ ರಚನೆ. ಭಾವ ಮತ್ತು ಭಾಷೆಯನ್ನು ಸರಿಬೆರೆಸುವುದು ಸುಗಮ ಸಂಗೀತಕ್ಕೆ ಸವಾಲಿನ ಪ್ರಶ್ನೆಯೆ. ತಂತ್ರಜ್ಞಾನದ ಒಡಂಬಡಿಕೆಯಲ್ಲಿ ವಾದ್ಯ ಸಂಗೀತಗಾರನ ನೈಪುಣ್ಯತೆ ನಗಣ್ಯವಾಗಿ ತಾಂತ್ರಿಕ ಸ್ಪಷ್ಟತೆಯೆ ಮೇಲುಗೈ ಪಡೆಯುತ್ತಿದೆ. ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಗುಣಮಟ್ಟವನ್ನು ಕಾಯ್ದುಕೊಂಡು ಸುಗಮಸಂಗೀತ ಮುನ್ನಡಿಯಿಡಬೇಕಾಗಿದೆ.

■ ಮೂಚಿ

## ಮಾತೇ ಮುತ್ತು

★ ನಿಮ್ಮ ಕೋಪಕ್ಕಾಗಿ ನಿಮ್ಮನ್ನು ಶಿಕ್ಷಿಸಲಾಗುವುದಿಲ್ಲ. ನಿಮ್ಮ ಕೋಪವೇ ನಿಮ್ಮನ್ನು ಶಿಕ್ಷಿಸುತ್ತದೆ.

-ಗೌತಮ ಬುದ್ಧ

★ ಪೂರ್ವಾಗ್ರಹ ಎನ್ನುವುದು ನಿಮ್ಮನ್ನು ಬಂಧಿಸುವ ಶೃಂಖಲೆಯಂತೆ. ಅದನ್ನು ಹೆಚ್ಚು ವರ್ಷ ಇಟ್ಟುಕೊಂಡಷ್ಟೂ ನೀವು ನಿಂತಲ್ಲೇ ಇರುತ್ತೀರಿ, ಮುಂದಕ್ಕೆ ಹೋಗುವುದಿಲ್ಲ.

-ಬಾಬ್ ಮಾರ್ಲೆ

★ ಗಂಡಸು ಯಾವತ್ತೂ ಮಹಿಳೆಯ ಪ್ರಥಮ ಪ್ರೇಮಿಯಾಗಲು ಬಯಸುತ್ತಾನೆ. ಹೆಂಗಸು ಯಾವತ್ತೂ ಗಂಡಸಿನ ಕೊನೆಯ ಪ್ರಣಯಿ ಆಗಲು ಬಯಸುತ್ತಾಳೆ.

-ಆಸ್ಕರ್ ವೈಲ್ಡ್

★ ಇತರರನ್ನು ಅರಿತುಕೊಳ್ಳುವುದು ಬುದ್ಧಿವಂತಿಕೆ. ನಮ್ಮನ್ನು ನಾವೇ ಅರಿತುಕೊಳ್ಳುವುದು ಜ್ಞಾನೋದಯ.

-ಲಾವೊ ತ್ಸು

★ ಅನುಕೂಲ ಮತ್ತು ಸೌಲಭ್ಯಗಳು ಇದ್ದಾಗ ಒಬ್ಬ ಮನುಷ್ಯ ಎಲ್ಲಿ ನಿಲ್ಲುತ್ತಾನೆಂಬ ಅಂಶದ ಮೇಲೆ ಆತನ ಸಾಮರ್ಥ್ಯವನ್ನು ಅಳೆಯಬೇಡಿ. ಸವಾಲುಗಳು ಮತ್ತು ವಿವಾದಗಳು ಇದ್ದಾಗ ಎಲ್ಲಿ ನಿಂತಿದ್ದಾನೆಂದು ನೋಡಿ ಅಳೆಯಿರಿ.

-ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್

★ ಮಹಿಳೆಯ ಮನಸ್ಸು ಗಂಡಸಿನ ಮನಸ್ಸಿಗಿಂತ ಹೆಚ್ಚು ಸ್ವಚ್ಛವಾಗಿರುತ್ತದೆ. ಏಕೆಂದರೆ ಆಕೆ ಪದೇ ಪದೇ ಅದನ್ನು ಬದಲಾಯಿಸುತ್ತಿರುತ್ತಾಳೆ.

-ಆಲಿವರ್ ಹರ್ಫರ್ಡ್

★ ಜೀವನದ ಮುಖ್ಯ ಉದ್ದೇಶವೇ ಇತರರಿಗೆ ನೆರವಾಗುವುದು. ನೆರವಾಗದಿದ್ದರೆ ಪರವಾಗಿಲ್ಲ, ತೊಂದರೆಯನ್ನಂತೂ ಕೊಡಬೇಡಿ.

-ದಲೈ ಲಾಮಾ

★ ಮೌನ ಅತ್ಯುತ್ತಮ ಗೆಳೆಯ. ಆತ ನಿಮಗೆಂದೂ ಮೋಸ ಮಾಡುವುದಿಲ್ಲ.

-ಕನ್‌ಫ್ಯೂಶಿಯಸ್

★ ತರ್ಕವು ನಿಮ್ಮನ್ನು ಎ ಯಿಂದ ಬಿ ವರೆಗೆ ಕೊಂಡೊಯ್ಯುತ್ತದೆ. ಆದರೆ ಕಲ್ಪನಾಶಕ್ತಿಯು ಎಲ್ಲೆಡೆಗೂ ಕರೆದೊಯ್ಯುತ್ತದೆ.

-ಆಲ್ಬರ್ಟ್ ಐನ್‌ಸ್ಟೀನ್

★ ಸಮಯ ಯಾವಾಗಲೂ ನಿರ್ಲಿಪ್ತ, ಅದು ಏನನ್ನೂ ಬದಲಾಯಿಸುವುದಿಲ್ಲ. ಆದರೆ ನಾಯಕರು ಧೈರ್ಯ ಮತ್ತು ಪ್ರಯೋಗಶೀಲತೆಗಳಿಂದ ಬದಲಾವಣೆಯನ್ನು ಮಾಡುತ್ತಾರೆ.

-ಜೆಸ್ಸಿ ಜಾಕ್ಸನ್

★ ಉತ್ತಮ ಹವಾಮಾನ ಬೇಕಿದ್ದರೆ ಸ್ವರ್ಗಕ್ಕೆ ಹೋಗಿ. ಒಳ್ಳೆಯ ಗೆಳೆಯರು ಬೇಕಿದ್ದರೆ ನರಕಕ್ಕೆ ಹೋಗಿ.

-ಮಾರ್ಕ್ ಟ್ವೈನ್

★ ಜೀವನದ ಅರ್ಥಗಳನ್ನು ಹುಡುಕಾಡುತ್ತಾ ಕೂರಬೇಡಿ. ಹಾಗೆ ಮಾಡಿದರೆ ನಿಮಗೆ ಜೀವಿಸಲು ಸಮಯವೇ ಸಿಗುವುದಿಲ್ಲ.

-ಆಲ್ಬರ್ಟ್ ಕಾಮೂ